† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಲೇಕಕ್ ನೋಟ್ ಪುಸ್ತಕಗಳನ್ನು ಮೈಸೂರು ಅಂತರ ರಾಷ್ಟ್ರೀಯ ಮಾರಾಟ ಲಿಮಿಟೆಡ್‌ನವರು ತಯಾರು ಮಾಡಿ ಸರಬರಾಜು ಮಾಡುತ್ತಿದ್ದರು. ಈಗ ಕಾಗದದ ಅಭಾವ ಇದ್ದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಲೇಕಕ್ ಪುಸ್ತಕಗಳನ್ನು ತಯಾರು ಮಾಡಲಿಕ್ಕೆ ಆಗುತ್ತಿಲ್ಲವೆಂದು ತಿಳಿಸಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಕಾಗದವನ್ನು ಪಡೆಯುವ ಬಗ್ಗೆ ಕೇಂದ್ರ ಸರ್ಕಾರದಿಂದ ಹಾಗೂ ಮಿಲ್‌ಗಳಿಂದ ಪ್ರಯತ್ನ ಮಾಡುತ್ತಿದ್ದಾರೆ ಕಾಗದ ಸಿಕ್ಕಿದ ತಕ್ಷಣ ಲೇಕಕ್ ಪುಸ್ತಕಗಳನ್ನು ತಯಾರು ಮಾಡಿ ಆದಷ್ಟು ಬೇಗ ಗುಲ್ಬರ್ಗ ವಿಭಾಗಕ್ಕೆ ಕಳುಹಿಸಿಕೊಡುವಂತೆ ತಿಳಿಸುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಜಿಲ್ಲೆಗೊಂದರಂತೆ ಮೈಸೂರು ಅಂತರ ರಾಷ್ಟ್ರೀಯ ಮಾರಾಟ ಲಿಮಿಟೆಡ್‌ನವರಿಂದ ಡಿಪೋಗಳನ್ನು ಪ್ರಾರಂಭ ಮಾಡುತ್ತಿರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಮೈಸೂರು ಅಂತರ ರಾಷ್ಟ್ರೀಯ ಮಾರಾಟ ಲಿಮಿಟೆಡ್‌ನವರಿಗೆ ತಿಳಿಸುತ್ತೇನೆ.

Horticullural garden near Mapur Tai Temple at Chinchansur Village.

1258. SRI ANNA RAO PATIL (Aland).—Will the Minister for Sericulture and Horticulture be pleased to state:—

(a) whether Government is aware that an Horticultural Garden has been planned to be developed at Chinchansur village at Aland taluka, Gulbarga District near Mapur Tai Temple;

(b whether Government is aware that thousands of piligrims visit the temple specially the backward class people during summer when Jatra is held and stay there for a month or so and that a garden is a necessity for providing them shade and shelter during summer.

(c) if so, what measures the Govt. would take to form a garden at the above place and when?

SRI K. B. SHIVAIAH (Minister for Sericulture and Horticulture).—

(a) No

(b) Yes.

(c) If the local panchayat or the temple authorities come forward to develop a garden, Govt. will assist by providing technical advice and available planting meterial.

ಶ್ರೀ ಅಣ್ಣಾರಾವ್ ಪಾಟೀಲ್.—ಅಧ್ಯಕ್ಷರೆ, ನನ್ನ ಎರಡನೆಯ ಪ್ರಶ್ನೆಗೆ ಎಸ್ ಎಂದು ಹೇಳಿದ್ದಾರೆ. ಸರ್ಕಾರದಿಂದ ಒಪ್ಪಿದ್ದಾರೆ. ಇನ್ನು ನನ್ನ ಮೂರನೆ ಪ್ರಶ್ನೆಗೆ ಸ್ಥಳೀಯ ಪಂಚಾಯಿತಿ ಅಥವಾ ದೇವಸ್ಥಾನದ ಆಡಳಿತ ವರ್ಗದವರು ತೋಟಗಾರಿಕೆ ಬೆಳೆಸುವ ಬಗ್ಗೆ ಮುಂದೆ ಬಂದರೆ, ಸರ್ಕಾರದವರು ತಾಂತ್ರಿಕ ಸಲಹೆ ಮತ್ತು ದೊರಕಲಿರುವ ತೋಟಗಾರಿಕೆ ಸಸಿಗಳನ್ನು ಒದಗಿಸುವ ಮೂಲಕ ಸಹಕರಿಸುವರು ಎಂದು ಹೇಳಿದ್ದಾರೆ ಆದುದರಿಂದ ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಚಿನ್‌ಚನ್‌ಸೂರು ಗ್ರಾಮದ ಮಾಪುರತಾಯಿ ದೇವಾಲಯದ ಬಳಿ ತೋಟಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಈ ಷಡ್ಯೂಲ್ಡ್ ಕ್ಯಾಸ್ಟ್ ಮತ್ತು ಷಡ್ಯೂಲ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್ ಕಾಸ್ ಪ್ರೋಗ್ರಾಂ ಪ್ರಕಾರ ಯಾವುದಾದರೂ ಒಂದು ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಅಂತ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ.ಬಿ. ಶಿವಯ್ಯ.—ಅಧ್ಯಕ್ಷರೆ, ನಮ್ಮ ಇಲಾಖೆಯ ಒಂದು ನೀತಿ ಏನು ಅಂದರೆ ಈ ಒಂದು ದೇವಸ್ಥಾನಗಳಿಗೆ, ಲೋಕಲ್ ಬಾಡೀಸ್‌ಗಳಿಗೆಲ್ಲಾ ಕೊಡಲಿಕ್ಕೆ ನಮ್ಮಲ್ಲಿ ಹಣ ಇಲ್ಲ ; ಮತ್ತು ಸಿಬ್ಬಂದಿ ಇಲ್ಲ. ಈ ಪ್ರೈವೇಟ್ ಪೀಪಲ್ಸ್, ಸ್ಕೂಲ್‌ನವರಾಗಲಿ, ಟಿ.ಡಿ.ಬಿ. ಯವರಾಗಲಿ, ದೇವಸ್ಥಾನದ ವರಾಗಲಿ ಮುಂದೆ ಬಂದು ನಮ್ಮ ತಾಂತ್ರಿಕ ಜ್ಞಾನ, ಮತ್ತು ಈ ಸಸಿಗಳು ಪ್ಲಾಂಟಿಂಗ್ ಮೆಟೀರಿಯಲ್ಸ್ ಬೇಕು ಅಂತ ಹೇಳಿದರೆ ಅವರಿಗೆ ನಾವು ಸಹಾಯ ಮಾಡುತ್ತೇವೆ

ಶ್ರೀ ಅಣ್ಣಾರಾವ್ ಪಾಟೀಲ್.—ನಿಮ್ಮ ಇಲಾಖೆಯಲ್ಲಿ ಸ್ಟಾಕ್ ಇಲ್ಲವೇ ?

ಶ್ರೀ ಕೆ. ಬಿ. ಶಿವಯ್ಯ.—ಸ್ಟಾಕ್ ಇದೆ, ಫಾರಂ ಮಾಡಲಿಕ್ಕೆ, ನರ್ಸರಿ ಮಾಡಲಿಕ್ಕೆ ಎಷ್ಟು ಬೇಕೋ ಅಷ್ಟು ಇದೆ. ಪ್ರೈವೇಟ್ ಸ್ಥಳಗಳಲ್ಲಿ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಅಣ್ಣಾರಾವ್ ಪಾಟೀಲ್.—ಅಧ್ಯಕ್ಷರೆ, ಈ ಸ್ಥಳದಲ್ಲಿ ಬೇಸಿಗೆ ಕಾಲದಲ್ಲಿ ನಡೆಯತಕ್ಕಂತಹ ಕಾರ್ಯಕ್ರಮಗಳಿಗೆ ಬಹಳ ಹಿಂದುಳಿದ ವರ್ಗದ ಸಾವಿರಾರು ಮಂದಿ ಯಾತ್ರಿಕರು ಭಾಗವಹಿಸುತ್ತಾರೆ. ಇಲ್ಲಿ ನೋಡಿದರೆ ಷಡ್ಡೂಲ್ಡ್ ಕ್ಯಾಸ್ಟ್‌ನವರಿಗೆ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೀರಾ ಅಲ್ಲಿ ಜನರಿಗೆ ಬಹಳ ಅನ್ಯಾಯವಾಗಿದೆ. ಆದುದರಿಂದ ಆ ಒಂದು ಏರಿಯಾ ಡೆವಲಪ್ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ಅಧ್ಯಕ್ಷರೆ, ಇದರ ಬಗ್ಗೆ ನನ್ನ ವಿವಾದ ಇಲ್ಲ. ಈಗ ದೇವಾಸ್ಥಾನಗಳು ಬೇಕಾದಷ್ಟು ಇವೆ ನಾವು ಎಲ್ಲಾ ದೇವಸ್ಥಾನಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಹೋದರೆ, ನಮಗೆ ಈಗಾಗಲೇ ಪಾರ್ಕ್‌ಗಳನ್ನು, ಗಾರ್ಡನ್ಸ್‌ಗಳನ್ನು ಮೈನ್‌ಟೈನ್ ಮಾಡಲಿಕ್ಕೆ ಸಾಕಷ್ಟು ಹಣ ಇಲ್ಲ. ಆದುದರಿಂದ ಇಂತಹ ಟೆಂಪಲ್ ಅಥಾರಿಟಿಯವರು ದುಡ್ಡು ಕೊಟ್ಟು ನಮ್ಮ ಇಲಾಖೆಯ ನೆರವನ್ನು ಕೇಳಿದರೆ ಅದನ್ನು ಪುಕ್ಕಸಟ್ಟೆ ಮಾಡಿಕೊಡುತ್ತೇವೆ. ಪ್ಲಾಂಟಿಂಗ್ ಮೆಟೀರಿಯಲ್ಸ್ ಕೂಡ ಒದಗಿಸಿ ಕೊಡುತ್ತೇವೆ. ನಿಮ್ಮ ಸಹಾನು ಭೂತಿ ಏನಿದೆ ಅದಕ್ಕೆ ನನ್ನ ಸಹಾನುಭೂತಿ ಕೂಡ ಇದೆ.

ಶ್ರೀ ಅಣ್ಣಾರಾವ್ ಪಾಟೀಲ್.—ಅಧ್ಯಕ್ಷರೆ. ನಾನು ಎಲ್ಲಾ ದೇವಸ್ಥಾನಗಳಿಗೂ ಕೇಳುತ್ತಿಲ್ಲ ಇವೊತ್ತು ಹೈದರಾಬಾದ್ ದೇವಸ್ಥಾನಗಳಿಗೆ ಎಷ್ಟ ಕೊಟ್ಟಿದ್ದೀರಾ ? ಹಳೆ ಮೈಸೂರು ದೇವಸ್ಥಾನ ಗಳಿಗೆ ಎಷ್ಟು ಕೊಟ್ಟಿದ್ದೀರಾ ? ಇವೊತ್ತು ಅಲ್ಲಿ ಬೇಸಿಗೆ ಕಾಲದಲ್ಲಿ ಜಾತ್ರೆ ನಡೆಯುವುದರಿಂದ ಅಲ್ಲಿ ನಿಲ್ಲಲಿಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಎಲ್ಲಾ ಕಡೆಯ ಜನರು ಬಂದಿರುತ್ತಾರೆ. ಆದುದರಿಂದ ಮಾನ್ಯ ಮಂತ್ರಿ ಗಳು ಯಾವ ಒಂದು ಸ್ಕೀಮ್‌ನಲ್ಲಿ ಇದನ್ನು ತೆಗೆದುಕೊಳ್ಳುತ್ತೀರಾ ಎಂದು ನಮಗೆ ಅಷ್ಯೂರೆನ್ಸ್ ಕೊಟ್ಟರೆ ಸಾಕು. ಇವೊತ್ತು ನಮ್ಮ ಭಾಗದಲ್ಲಿರತಕ್ಕಂತಹ ಈ ದೇವಸ್ಥಾನಕ್ಕೆ ಅನುಕೂಲ ಮಾಡಿ ಕೊಡದೆ ಬಹಳ ಅನ್ಯಾಯವಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.— ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾದುದು ಅಲ್ಲ. ಈಗ ಡಿಸ್ಟ್ರಿಕ್ಟ್ ಹೆಡಾಕ್ವಾರ್ಟರ್ಸ್‌ಗಳಲ್ಲಿ, ಆಫೀಸುಗಳ ಪ್ರಿಮಿಸಸ್‌ಗಳಲ್ಲಿ, ಹಾಸ್ಪಿಟಲ್ ಪ್ರಿಮಿಸಸ್‌ಗಳಲ್ಲಿ ಎಲ್ಲೆಲ್ಲಿ ಮೈನ್‌ಟೈನ್ ಮಾಡಬೇಕೋ ಅಲ್ಲಿ ಮಾಡುತ್ತಿದ್ದೇವೆ. ಇವೊತ್ತು ಹಳೆಯ ಕರ್ನಾಟಕ ಆಗಲಿ ಹೊಸ ಕರ್ನಾಟಕ ಆಗಲಿ ಯಾವ ಟೆಂಪಲ್‌ಗಳ್ಲೂ ಮಾಡಿಲ್ಲ. ನಾವು ಪ್ಲಾಂಟಿಂಗ್ ಮೆಟೀರಿಯಲ್ಸ್ ಫ್ರೀ ಸಪ್ಲೈ ಮಾಡುತ್ತೇವೆ ಮೈನಟೆನೆನ್ಸ್‌ಗೆ ಟೆಂಪಲ್ ಅಥಾರಿಟಿಯವರು ಮುಂದೆ ಬಂದು ಮಾಡಬೆಕು. ಇವೊತ್ತು ಗಿಡ ನೆಡತಕ್ಕದ್ದನ್ನು ಮಾಡದರೆ ಸಾಲದು ಅವುಗಳನ್ನು ಮಕ್ಕಳು ಸಾಕಿದಂತೆ ಸಾಕಬೇಕಾ ಗುತ್ತದೆ. ಆದುದರಿಂದ ಈ ಟೆಂಪಲ್ ಅಥಾರಿಟಿಗಳು ಮುಂದೆ ಬಂದು ಸ್ವಲ್ಪ ಭಾಗದಷ್ಟು ದುಡ್ಡು ಹಾಕಿ ಮಾಡುವುದಾದರೆ ನಾವು ಪ್ಲಾಂಟಿಂಗ್ ಮೆಟೀರಿಯಲ್ಸ್, ತಾಂತ್ರಿಕ ನೆರವನ್ನು ಉಚಿತ ಒದಗಿಸುತ್ತೇವೆ.

ಶ್ರೀ ಅಣ್ಣಾರಾವ್ ಪಾಟೀಲ್.—ಮಾನ್ಯ ಸಚಿವರು ಒಮ್ಮೆ ಬಂದು ಅಲ್ಲಿಗೆ ವಿಸಿಟ್ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಉತ್ತರ ಇಲ್ಲ.